ಶ್ರೀ ಎಂ. ಎಸ್. ಕೃಷ್ಣನ್.—ಜಿಲ್ಲಾ ಹಾಗೂ ಸೆಶನ್ ನ್ಯಾಯಾಧೀಶರು ಇರುವುದು ಬೇಡ ಎಂದೇ ಲೇಬರ್ ಕೋರ್ಟುಗಳನ್ನು ಮಾಡಿದರಂ. ಆದರೆ ಈಗ ಪುನಃ ಮೊದಲಿನ ತರಹವೇ ಮಾಡಿದ್ದಾರೆ. ಈ ಅವಧಿಯೋಳಗೆ ವರ್ಗಾಯಿಸಲಾದ ಪ್ರಕರಣಗಳ ಲೆಕ್ಕವನ್ನು ಸಹ ಇಲ್ಲಿ ಕೊಟ್ಟಿದ್ದಾರೆ. ಈ ರೀತಿ ವರ್ಗಾವಣೆ ಮಾಡುವುದರಲ್ಲಿಯೇ ಒಂದು ವರ್ಷ ನಿಧಾನವಾದ ಕಾರಣ ಅನೇಕ ಜನ ಕಾರ್ಮಿಕರಿಗೆ ನ್ಯಾಯ ದೊರಕಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಸಿ. ಎನ್. ಪಾಟೀಲ್.—ಹಲವಾರು ತಿಂಗಳ ಕಾಲ ವಿಳಂಬ ಆಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ.

Granting of Road Site in Chickballapur

447. SRI C. BYRE GOWDA (Vemagal)—Will the Minister for Municipal Administration and Political Pensions be pleased to state.-

(*a*) whether a road site in Sri A J. Khan Layout in Chickballapur measuring E.W. 100′ × N.S. 40′ was handed over by the Municipal Administrator on 4th September 1974 to Sri C. V. Venkatarayappa, M.L.A. on nominal rent of Rs. 25 per month;

(*b*) the name of the Municipal President who approved the above noted layout plan, etc;

(*c*) whether the Deputy Commissioner, Kolal had suspended a resolution passed by the Administrator granting the above Road site to Sri C. V. Venkatarayappa on receipt of the representation of the Public.

(*d*) if so, the action taken against the persons concerned?

SRI D. K. NAIKAR (Minister for Municipal Administration and Political Pensions).—

(*a*) Yes.

(*b*) Sri C. V. Venkatarayappa M.L A.

(*c*) Yes.

(*d*) The Government Order was communicated to Sri C. V. Venkatarayappa, M L. A. with the intimation to reassign the property leased immediately besides cancelling the Registered Deed executed on 4th October 1974.

ಶ್ರೀ ಸಿ. ಬೈರೇಗೌಡ —ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದ್ದಿರಿ. ಈ ರೀತಿ ಸೈಟನ್ನು ಮಂಜೂರು ಮಾಡಬೇಕಾದರೆ ನಿಯಮಾಗಳೇನಾದರೂ ಇದೆಯೇ? ಮತ್ತು ಈ ಸೈಟ್‌ಗಾಗಿ ಇವರೊಬ್ಬರದ್ದೇ ಅರ್ಜಿ ಇತ್ತೋ ಅಥವಾ ಬೇರೆಯವರೂ ಅರ್ಜಿ ಹಾಕಿದ್ದರೋ?

†ಶ್ರೀ ಡಿ. ಕೆ. ನಾಯ್ಕರ್.—ನಿಯಮಗಳ ಪ್ರಕಾರ ಮಾಡಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಈ ಸೈಟ್ ಬಗ್ಗೆ ಬೇರೆಯವರೂ ಅರ್ಜಿ ಹಾಕಿದ್ದರೋ ಅಥವಾ ಇಲ್ಲವೋ ಎಂಬ ಮಾಹಿತಿ ಈಗ ನನ್ನ ಹತ್ತಿರ ಇಲ್ಲ.

ಶ್ರೀ ಸಿ. ವಿ. ವೆಂಕಟರಾಯಪ್ಪ.—ಮುನಿಸಿಪಲ್ ಆಕ್ಟ್‌ನ ೬೨(೨) ಪ್ರಕಾರ ಜಾಗದ ಬೆಲೆ ೨ ಸಾವಿರ ರೂ.ಗಳೊಳಗೆ ಇದ್ದರೆ ಅಂತಹ ಜಾಗವನ್ನು ೫ ವರ್ಷದವರೆಗೆ ಲೀಸ್‌ಗೆ ಕೊಡುವುದಕ್ಕೆ ಅಧಿಕಾರ ವಿದೆಯಲ್ಲವೇ.

ಶ್ರೀ ಡಿ. ಕೆ. ನಾಯ್ಕರ್.—೫ ವರ್ಷದವರೆಗೆ ಕೊಡುವುದಕ್ಕೆ ಅಧಿಕಾರವಿದೆ.

ಶ್ರೀ ಸಿ. ವಿ. ವೆಂಕಟರಾಯಪ್ಪ.—ಇದು ೨ ವರ್ಷಕ್ಕೆ ಮಾತ್ರ ಕೊಟ್ಟಿದ್ದಲ್ಲವೇ?

ಶ್ರೀ ಡಿ. ಕೆ. ನಾಯ್ಕರ್.- ಹೌದು.

ಶ್ರೀ ಸಿ. ವಿ. ವೆಂಕಟರಾಯಪ್ಪ.—ಈ ಕರಾರನ್ನು ಸರ್ಕಾರದವರು ರದ್ದು ಮಾಡುವುದಕ್ಕೆ ಕಾರಣ ಏನು?

ಶ್ರೀ ಡಿ. ಕೆ. ನಾಯ್ಕರ್ —ಸರ್ಕಾರದವರು ಆದನ್ನು ರದ್ದು ಮಾಡುವುದಕ್ಕೆ ಕಾರಣವೇನೆಂದರೆ ಈ ಬಗ್ಗೆ ಜಿಲ್ಲಾಧಿಕಾರಿಯವರಿಗೆ ಪಿಟಿಷನ್ ಬಂದಿದ್ದರಿಂದ ಮತ್ತು ಜಾಗಕ್ಕೆ ಬೆಲೆ ಕಟ್ಟಿದ್ದು ಕಡಿಮೆ ಎಂದ, ಅವರಿಗೆ ತಿಳಿದು ಬಂದಿದ್ದರಿಂದ ೩೦೬ನೇ ಕಲಂ ಪ್ರಕಾರ ಅವರು ತಮ್ಮ ಒಂದು ಅಧಿಕಾರವನ್ನು ಉಪಯೋಗಿಸಿ ಇದನ್ನು ಸಸ್ಪೆಂಡ್ ಮಾಡಿದ್ದಾರೆ.

ಶ್ರೀ ಸಿ. ವಿ ವೆಂಕಟರಾಯಪ್ಪ.—ಈ ಲೀಜ್-ಔಟ್ ಮಾಡುವಾಗ ಖಾಸಗಿಯವರೊಬ್ಬರಿಂದ ಈ ನಿವೇಶನವನ್ನು ತೆಗೆದುಕೊಂಡಿರುವುದಕ್ಕೆ ಕಾರಣವೇನು?

ಶ್ರೀ ಡಿ. ಕೆ. ನಾಯ್ಕರ್.—ಕಾರಣ ಏನೇ ಇರಲಿ, ಮುನಿಸಿಪಾಲಿಟಿಗೆ ಬರತಕ್ಕಂಥ ಆದಾಯ ಇದರಿಂದ ಕಡಿಮೆಯಾಯಿತು ಎಂದು ಸರ್ಕಾರಕ್ಕೆ ತಿಳಿದು ಬಂದಿದ್ದರಿಂದ ಸರ್ಕಾರ ಈ ಒಂದು ಕ್ರಮ ತೆಗೆದುಕೊಂಡಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ರೀತಿ ಜಾಗವನ್ನು ಲೀಸ್‌ಗೆ ಕೊಡುವಾಗ ಸರ್ಕಾರದ ಅನುಮತಿ ಪಡೆದು ಮಾಡಲಾಗಿದೆಯೇ ಹೇಗೆ?

ಶ್ರೀ ಡಿ. ಕೆ. ನಾಯ್ಕರ್.—ಕಾನೂನು ಪ್ರಕಾರ ೫ ವರ್ಷದವರೆಗೆ ಲೀಸ್‌ಗೆ ಕೊಡುವುದಕ್ಕೆ ಅವರಿಗೇ ಅಧಿಕಾರವಿದೆ. ೫ ವರ್ಷಕ್ಕಿಂತ ಜಾಸ್ತಿಯಾದರೆ ಅದು ಸರ್ಕಾರದ ಅನುಮತಿಗೆ ಬರಬೇಕು.

ಶ್ರೀ ಸಿ. ಬೈರೇಗೌಡ.—ಈ ಜಮೀನಿಗೆ ಜಾಸ್ತಿ ರೆಂಟ್ ಬರುತ್ತದೆಂದು ತಿಳಿದ್ದರೂ ಸಹ ಕಡಿಮೆ ರೆಂಟ್‌ನ್ನು ನಿಗದಿ ಮಾಡಿ ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡ ಅಧಿಕಾರಿಗಳ ಮೇಲೆ ಏನು ಕ್ರಮ ಕೈಕೊಳ್ಳುತ್ತೀರಾ?

ಶ್ರೀ ಡಿ. ಕೆ. ನಾಯ್ಕರ್.—ಹೀಗೆ ಮುನಿಸಿಪಾಲಿಟಿಗೆ ಲುಕ್ಸಾನಾಗತಕ್ಕಂಥ ತಿರ್ಮಾನವನ್ನು ತೆಗೆದುಕೊಂಡರೆ, ಅದನ್ನು ಸಸ್ಪೆಂಡ್ ಮಾಡುವಂತಹ ಅಧಿಕಾರವನ್ನು ಡಿ. ಸಿ. ಅವರಿಗೆ ಕೊಟ್ಟಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ — ಈ ಸೈಟನ್ನು ತೆಗೆದುಕೊಂಡ ವರ್ಷ ಅದರ ಬೆಲೆ ಎಷ್ಟು ಎಂದು ನಿಗದಿ ಮಾಡಿದ್ದರು ಮತ್ತು ಈಗ ಅದರ ಬೆಲೆ ಎಷ್ಟಿದೆ ಎಂಬುದನ್ನು ಹೇಳಂತ್ತೀರಾ?

ಶ್ರೀ ಡಿ. ಕೆ. ನಾಯ್ಕರ್.—ಆಗಿನ ಕಾಲಕ್ಕೆ ಅದರ ಬೆಲೆ ಎಷ್ಟು ಎಂಬ ಬಗ್ಗೆ ದರವನ್ನು ನಿಗದಿ ಮಾಡಿದ ಬಗ್ಗೆ ರೆಕಾರ್ಡ್ ಇಲ್ಲ. ಆದರೆ ಡಿ. ಸಿ. ಅವರಿಗೆ ಈ ಬಗ್ಗೆ ರೆಪ್ರೆಸೆಂಟೇಷನ್ ಬಂದಮೇಲೆ, ಅವರೇ ಸ್ವತಃ ಹೋಗಿ ಸ್ಥಳ ಪರಿಶೀಲನೆ ಮಾಡಿದಾಗ, ಆ ಜಾಗ ಒಳ್ಳೆಯ ಮಹತ್ವದ ಸ್ಥಾನದಲ್ಲಿದೆ ಯಾದ ಕಾರಣ ಅದರಿಂದ ಹೆಚ್ಚಿನ ಕಿಮ್ಮತ್ತು ಬರುತ್ತದೆಂದು ಕಂಡುಹಿಡಿದಿದ್ದಾರೆ.

ಶ್ರೀ ಸಿ. ವಿ. ವೆಂಕಟರಾಯಪ್ಪ.—ಬಿ. ಪಿ. ರೋಡಿನಿಂದ ನಂದಿ ರೋಡಿಗೆ ಸಂಪರ್ಕ ಕಲ್ಪಿಸಲು ಒಂದು ಫರ್ಲಾಂಗ್ ಉದ್ದದ ರಸ್ತೆಯನ್ನು ಮಾಡಲು ಈ ಸೈಟ್ ಅಡ್ಡಿಯಾಗುತ್ತದೆಂಬ ಕಾರಣದಿಂದಲೇ ಖಾಸಗಿಯವರೊಬ್ಬರಿಂದ ಇದನ್ನು ಪಡೆದು ಕೊಳ್ಳಲಾಯಿತಲ್ಲವೇ?

ಶ್ರೀ ಡಿ. ಕೆ ನಾಯ್ಕರ್.—ಯಾವ ಉದ್ದೇಶಕ್ಕೇ ತೆಗೆದುಕೊಂಡಿರಲಿ, ಅದರಿಂದ ಮುನಿಸಿಪಾಲಿಟಿಗೆ ಲುಕ್ಸಾನು ಆಗುವಂತಹ ಕ್ರಮ ತೆಗೆದುಕೊಳ್ಳುವ ಅಧಿಕಾರ ಮುನಿಸಿಪಾಲಿಟಿಗೆ ಇಲ್ಲ. ಅದಕ್ಕಾಗಿಯೇ ಈ ಬಗ್ಗೆ ಆದ ಕರಾರನ್ನು ವಜಾ ಮಾಡಿದ್ದು.

ಶ್ರೀ ಸಿ ಬೈರೇಗೌಡ —ನನ್ನ ಕೊನೆಯ ಪ್ರಶ್ನೆಗೆ ಉತ್ತರವಾಗಿ ಗುತ್ತಿಗಾ ನೀಡಿದ್ದ ಆಸ್ತಿಯನ್ನು ಕೂಡಲೇ ಹಿಂದಿರುಗಿಸುವಂತೆ ಆದೇಶ ನೀಡಲಾಗಿದೆ ಎಂದು ಹೇಳಿದ್ದೀರಿ. ಅದರಂತೆ ಅವರು ಅದನ್ನು ಹಿಂದಿರುಗಿಸಿದ್ದಾರೆಯೇ? ಹಿಂದಿರುಗಿಸದಿದ್ದರೆ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವಕ್ರಮವಾದರೂ ಏನು?

12-30 P.M.

ಶ್ರೀ ಡಿ.ಕೆ ನಾಯ್ಕರ್ —ಲೀಜನ್ನು ಕ್ಯಾನ್ಸಲ್ ಮಾಡಿ ಎಂದು ಡೈರೆಕ್ಷನ್ ಕೊಟ್ಟಮೇಲೆ ಅದು ಇಂಪ್ಲಿಮೆಂಟ್ ಆಗುತ್ತದೆ ಎಂದು ಸರ್ಕಾರಕ್ಕೆ ಪ್ರಮಾಣಪತ್ರ ಇರುತ್ತದೆ. ಮೂನ್ಯ ಸದಸ್ಯರು ಅವನ್ನು ಇನ್ನೂ ಕೊಟ್ಟಿಲ್ಲ ಎಂದು ಹೇಳುವುದಾದರೆ ಅದನ್ನು ವಕೇಟ್ ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿ ಬೈರೇಗೌಡ – ಆಕ್ಟೋಬರ್ ತಿಂಗಳಿನಲ್ಲಿ ಈ ಆಜ್ಞೆ ಆಗಿದೆ ಈಗ ನಾವು ಜುಲೈ ತಿಂಗಳು ೭ನೇ ತಾರೀಖಿನಲ್ಲಿದ್ದೇವೆ ಈ ಪ್ರಶ್ನೆಯನ್ನು ಕೆಳದ ಮೇಲಾದರೂ ಇವೊತ್ತಿನ ಪರಿಸ್ಥಿತಿ ಏನು ಎಂಬುದನ್ನು ಹೇಳಿದ್ದಿರೆ ಏನಾಗಿದೆ ಎಂಬುದನ್ನು ಹೇಳಬೇಕು?

ಶ್ರೀ ಡಿ.ಕೆ. ನಾಯ್ಕರ್ —ಅದನ್ನು ಖಚಿತವಾಗಿ ಹಾಕಿಲ್ಲ. ೧೯೭೪ನೇ ಇಸವಿ ಆಗಸ್ಟ್ ತಿಂಗಳಲ್ಲಿ ರೆಜುಲೂಷನ್ ಮಾಡಿ ಕೂಡಬೇಕು ಎಂದು ಹೇಳಿದೆ. ಅದನ್ನು ಸಟ್‌ಅಸೈಡ್ ಮಾಡಿ ಎಂದು ೧೯೭೭ನೇ ಜುಲೈ ತಿಂಗಳಲ್ಲಿ ಅವರಿಗೆ ತಿಳಿಸಿದ್ದೇವೆ. ಆದ್ದರಿಂದ ಎಷ್ಟು ವರ್ಷ ಆಗುವುದಕ್ಕಿಂತ ಮುಂಚೆಯೇ ಅದನ್ನು ಎಕ್ಷನ್ ಮಾಡಿಸುವ ಕ್ರಮವನ್ನು ಕೈಗೊಂಡಿದ್ದೇವೆ.

Chairmen appointed to the Boards Corporations and other Governments Undertakings

516 SRI M. H. JAYAPRAKSH NARAYAN (Sirsi).—Will the Chief inister be pleased to state:—

(*a*) the names of Boards, Corporations and other Bodies registered under Companies Act or any other Act that are functioning in the State Government at present;

(*b*) the names of Chairmen appointed by Government on these bodies, their age, qualification, caste may be furnished,

(*c*) whether it is not the policy of the Government to appoint Scheduled Caste and Scheduled Tribes persons on such boards if so, the names of persons appointed as Chairmen?

SRI D. DEVARAJ URS (Chief Minister):—

(*a*) and (*b*) List containing the names of Boards, Corporations and other Bodies and also the names of Chairmen appointed by Government, as on 23rd JUNE 1977 is appended. Information regarding age and caste is not available. Regarding qualification, usually men of proven merit with social and professional standing in public life and who are generally conversant with the problems and aspirations of the people are selected and appointed by Government.

(*c*) No. Appointments are not made on the basis of caste.